ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-03-1993.

# *ಹೋಲಿಯನ್ನು ಆಚರಿಸುವುದು ಅರ್ಥಾತ್ ಶ್ರೇಷ್ಠ ಮತ್ತು ಪವಿತ್ರರಾಗುವುದು*

(होली मनाना अर्थात् हाइएस्ट और होलिएस्ट बनना)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ಆನಂದ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸೃಷ್ಟಿ ಚಕ್ರದಲ್ಲಿ ಎಲ್ಲರಿಗಿಂತಲೂ ಉನ್ನತವಾದ ಪಾತ್ರವನ್ನು ಅಭಿನಯಿಸುವ ಉನ್ನತ ಆತ್ಮರೊಂದಿಗೆ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾರವರು ತನ್ನ ಸರ್ವ ಶ್ರೇಷ್ಠ (ಹೈಯೆಸ್ಟ್) ಮತ್ತು ಪವಿತ್ರ (ಹೋಲಿಯೆಸ್ಟ್) ಮಕ್ಕಳನ್ನು ನೋಡುತ್ತಿದ್ದಾರೆ. ಎಲ್ಲಾ ಮಕ್ಕಳು ಈ ಬೇಹದ್ದಿನ ಡ್ರಾಮಾದಲ್ಲಿ ಹಾಗೂ ಸೃಷ್ಟಿ ಚಕ್ರದಲ್ಲಿ ಎಲ್ಲರಿಗಿಂತ ಶ್ರೇಷ್ಠರು ಹಾಗೂ ಎಲ್ಲರಿಗಿಂತ ಹೆಚ್ಚು ಪವಿತ್ರರೂ ಆಗಿದ್ದಾರೆ. ಆದಿಯಿಂದ ಇದುವರೆಗೂ, ಸಂಗಮದ ಸಮಯದವರೆಗೂ ನೋಡಿ - ನೀವಾತ್ಮರಾಗಿಂತ ಯಾರಾದರೂ ಶ್ರೇಷ್ಠರಿದ್ದಾರೆಯೇ? ಎಷ್ಟು ನೀವು ಶ್ರೇಷ್ಠ ಸ್ಥಿತಿಯನ್ನು ಶ್ರೇಷ್ಠ ಪದವಿಯನ್ನು ಪ್ರಾಪ್ತಿ

ಮಾಡಿಕೊಳ್ಳುವಿರೋ ಅಷ್ಟು ಅನ್ಯ ಯಾವ ಅತ್ಮರೂ ಸಹ, ಧರ್ಮ ಪಿತರಾಗಲಿ, ಮಹಾನ್ ಅತ್ಮರಾಗಲಿ, ಯಾರೂ ಕೂಡ ಇಷ್ಟು ಶ್ರೇಷ್ಠರಾಗುವುದಿಲ್ಲ. ಏಕೆಂದರೆ ನೀವು ಶ್ರೇಷ್ಠಾತಿಶ್ರೇಷ್ಠ ಭಗವಂತನ ಮೂಲಕ ಡೈರೆಕ್ಟ್ ಪಾಲನೆ, ವಿದ್ಯೆ ಹಾಗೂ ಶ್ರೇಷ್ಠ ಜೀವನದ ಶ್ರೀಮತವನ್ನು ತೆಗೆದುಕೊಳ್ಳುವಂತಹ ಆತ್ಮರಾಗಿದ್ದೀರಿ. ತಮ್ಮನ್ನು ತಾವು ತಿಳಿದುಕೊಂಡಿದ್ದೀರಲ್ಲವೇ ಅನಾದಿ ಕಾಲವನ್ನು ನೋಡಿ. ಅನಾದಿ ಕಾಲದಲ್ಲಿ ಪರಂಧಾಮದಲ್ಲಿ ತಂದೆಯ ಸಮೀಪ ಇರುವಂತಹವರಾಗಿದ್ದೀರಿ. ತಮ್ಮ ಸ್ಥಾನ ನೆನಪಿದೆಯಲ್ಲವೇ ಎಂದ ಮೇಲೆ ಅನಾದಿ ಕಾಲದಲ್ಲಿಯೂ ಶ್ರೇಷ್ಠರು ನೀವಾಗಿದ್ದೀರಿ, ಸಮೀಪ ಜೊತೆಗಾರರು ಹಾಗೂ ಆದಿಕಾಲದಲ್ಲಿಯೂ - ಸೃಷ್ಟಿ ಚಕ್ರದ ಸತ್ಯಯುಗ ಕಾಲದಲ್ಲಿ ದೈವೀ ಪದವಿ ಪ್ರಾಪ್ತಿ ಮಾಡಿಕೊಳ್ಳುವಂತಹ ಆತ್ಮರಾಗಿದ್ದೀರಿ, ದೈವೀ ಆತ್ಮರ ಸಮಯ 'ಆದಿ ಕಾಲ'ದಲ್ಲೂ ಸರ್ವ ಶ್ರೇಷ್ಠರಾಗಿದ್ದೀರಿ ಹಾಗೂ ಸಾಕಾರ ಮನುಷ್ಯ ಜೀವನದಲ್ಲಿ ಸರ್ವ ಪ್ರಾಪ್ತಿ ಸಂಪನ್ನ, ಶ್ರೇಷ್ಠರಾಗಿದ್ದೀರಿ. ಶ್ರೇಷ್ಠ ಚಕ್ರದಲ್ಲಿ ಈ ದೈವೀ ಪದವಿ ಅರ್ಥಾತ್ ದೇವತಾ ಜೀವನವೇ ಇಂತಹದ್ದಾಗಿದೆ. ಇಲ್ಲಿ ತನು, ಮನ, ಧನ, ಜನ - ನಾಲ್ಕೂ ಪ್ರಕಾರದಲ್ಲಿಯೂ ಸರ್ವ ಪ್ರಾಪ್ತಿಗಳು ಪ್ರಾಪ್ತವಾಗಿವೆ. ತಮ್ಮ ದೈವೀ ಜೀವನ ನೆನಪಿದೆಯೆ ಅಥವಾ ಮರೆತು ಹೋಗಿದ್ದೀರಾ? ಅನಾದಿ ಕಾಲವು ಸಹ ನೆನಪು ಬಂದಿತಲ್ಲವೇ, ಆದಿಕಾಲವು ನೆನಪು ಬಂದಿತೇ! ಒಳ್ಳೆಯ ರೀತಿಯಲ್ಲಿ ನೆನಪು ಮಾಡಿ ಅಂದ ಮೇಲೆ ಎರಡು ಸಮಯದಲ್ಲಿ ಶ್ರೇಷ್ಠರಾಗಿದ್ದಿರಲ್ಲವೇ.

ಅದರ ನಂತರ ಮಧ್ಯಕಾಲದಲ್ಲಿ ಬನ್ನಿ, ದ್ವಾಪರದಲ್ಲಿ ನಿಮ್ಮ ಜಡ ಚಿತ್ರ ತಯಾರಿಸುತ್ತಾರೆ ಅರ್ಥಾತ್ ಪೂಜ್ಯ ಅತ್ಮರಾಗುವಿರಿ. ಪೂಜ್ಯರಲ್ಲಿಯೂ ನೋಡಿ – ಎಲ್ಲರಿಗಿಂತ ವಿಧಿಪೂರ್ವಕ ಪೂಜೆ ದೈವಿ ಆತ್ಮರದೇ ಆಗುತ್ತದೆ. ನಿಮ್ಮೆಲ್ಲರ ಮಂದಿರಗಳು ತಯಾರಾಗಿವೆ. ಡಬಲ್ ವಿದೇಶಿಯರ ಮಂದಿರ ತಯಾರಾಗಿದೆಯೇ? ಅಥವಾ ಕೇವಲ ಭಾರತವಾಸಿಯರದ್ದಾಗಿದೆಯೇ? ನಿಮ್ಮದೂ ಆಗಿದೆಯಲ್ಲವೇ! ದೈವೀ ಆತ್ಮರ ಪೂಜೆಯಂತೆ ಬೇರೆ ಯಾವ ಆತ್ಮರ ಪೂಜೆಯೂ ಆಗುವುದಿಲ್ಲ. ಯಾವುದೇ ಮಹಾತ್ಮ ಮುಂತಾದವರನ್ನು ಮಂದಿರದಲ್ಲಿ ಕುಳ್ಳಿರಿಸಿ ಬಿಡುತ್ತಾರೆ ಆದರೆ ಇಂತಹ ಭಾವನೆ ಹಾಗೂ ವಿಧಿಪೂರ್ವಕ ಪ್ರತಿ ಕರ್ಮದ ಪೂಜೆಯಾಗಲಿ - ಈ ರೀತಿಯ ಪೂಜೆಯಾಗಲು ಸಾಧ್ಯವಿಲ್ಲ. ಮಧ್ಯಕಾಲದಲ್ಲಿಯೂ ನೀವು ಪೂಜ್ಯ ರೂಪದಲ್ಲಿ ಶ್ರೇಷ್ಠರಾಗಿದ್ದೀರಿ. ಶ್ರೇಷ್ಠ ಆಗಿದ್ದೀರಿ.

ಈಗ ಅಂತ್ಯದಲ್ಲಿ ಬನ್ನಿ, ಈಗ ಸಂಗಮಯುಗದಲ್ಲಿಯೂ ಶ್ರೇಷ್ಠಾತಿಶ್ರೇಷ್ಠ ಬ್ರಾಹ್ಮಣ ಆತ್ಮರು. 'ಬ್ರಾಹ್ಮಣ ಸೋ ಫರಿಶ್ತಾ ಅತ್ಮರಾಗುತ್ತಿದ್ದೀರಿ. ಎಂದ ಮೇಲೆ ಅನಾದಿ, ಆದಿ, ಮಧ್ಯ ಹಾಗೂ ಅಂತ್ಯದಲ್ಲಿ ಶ್ರೇಷ್ಠರಾದಿರಲ್ಲವೇ. ಇಷ್ಟು ನಶೆಯಿದೆಯೇ, ಆತ್ಮಿಕ ನಶೆಯಿದೆಯಲ್ಲವೇ? ಅಭಿಮಾನವಲ್ಲ ಆದರೆ ಸ್ವಮಾನವಾಗಿದೆ. ಸ್ವಮಾನದ ನಶೆಯಿದೆ. ಸ್ವ ಅರ್ಥಾತ್ ಆತ್ಮನ, ಶ್ರೇಷ್ಠ ಆತ್ಮನ ಅತ್ಮಿಕ ನಶೆಯಿದೆ ಇಡೀ ಚಕ್ರದಲ್ಲಿ ಶ್ರೇಷ್ಠರು ಆಗಿದ್ದೀರಿ ಜೊತೆ ಜೊತೆ ಪವಿತ್ರರು ಆಗಿದ್ದೀರಿ. ಬೇರೆ ಆತ್ಮರು ಸಹ ಹೋಲಿ ಅರ್ಥಾತ್ ಪವಿತ್ರರಾಗುತ್ತಾರೆ ಆದರೆ ನಿಮ್ಮ ವರ್ತಮಾನ ಸಮಯದ ಪವಿತ್ರತೆ ಹಾಗೂ ದೇವತಾ ಜೀವನದ ಪವಿತ್ರತೆ ಎಲ್ಲರಿಗಿಂತ ಶ್ರೇಷ್ಠ ಹಾಗೂ ಭಿನ್ನವಾಗಿದೆ. ಈ ಸಮಯದಲ್ಲಿಯೂ ಸಂಪೂರ್ಣ ಪವಿತ್ರತೆ ಅರ್ಥಾತ್ ಹೋಲಿಯಾಗುತ್ತೀರಿ.

ಸಂಪೂರ್ಣ ಪವಿತ್ರತೆಯ ಪರಿಭಾಷೆ ಬಹಳ ಶ್ರೇಷ್ಠ ಹಾಗೂ ಸಹಜವೂ ಆಗಿದೆ. ಸಂಪೂರ್ಣ ಪವಿತ್ರತೆಯ ಅರ್ಥವೇ ಆಗಿದೆ - ಸ್ವಪ್ನ ಮಾತ್ರದಲ್ಲಿಯು ಅಪವಿತ್ರತೆ ಮನಸ್ಸನ್ನು ಹಾಗೂ ಬುದ್ಧಿಯನ್ನು ಟಚ್ ಮಾಡದಿರಲಿ. ಇವರನ್ನೇ ಸತ್ಯವಾದ

ವೈಷ್ಣವರು ಎಂದು ಕರೆಯಲಾಗುವುದು. ಈಗ ಬೇಕಾದರೆ ನಂಬರ್ ವಾರ್ ಪುರುಷಾರ್ಥಿಯಾಗಿದ್ದೀರಿ. ಆದರೆ ಪುರುಷಾರ್ಥದ ಲಕ್ಷ್ಯ ಸಂಪೂರ್ಣ ಪವಿತ್ರತೆಯದೇ ಆಗಿದೆ ಹಾಗೂ ಸಹಜ ಪವಿತ್ರತೆಯನ್ನು ಧಾರಣೆ ಮಾಡುವಂತಹ ಆತ್ಮರಾಗಿದ್ದಿರಿ ಸಹಜ ಏಕೆ? ಏಕೆಂದರೆ ಧೈರ್ಯ ಮಕ್ಕಳದ್ದು ಹಾಗು ಸಹಯೋಗ ಸರ್ವಶಕ್ತಿವಂತ ತಂದೆಯದ್ದು ಆದ್ದರಿಂದ ಕಷ್ಟ ಅಥವಾ ಅಸಂಭವವೂ ಸಹ ಸಂಭವವಾಗಿದೆ ಹಾಗೂ ನಂಬರ್‌ವಾರ್ ಆಗುತ್ತಿದೆ. ಹೋಲಿ ಅರ್ಥಾತ್ ಪವಿತ್ರತೆಯ ಶ್ರೇಷ್ಠ ಸ್ಥಿತಿಯ ಅನುಭವ ಬ್ರಾಹ್ಮಣ ಆತ್ಮರಾದ ನಿಮಗಿದೆ. ಸಹಜವೆನಿಸುತ್ತದೆಯೇ ಅಥವಾ ಕಷ್ಟ ಎನಿಸುತ್ತದೆಯೇ? ಸಂಪೂರ್ಣ ಪವಿತ್ರತೆ ಕಠಿಣವೇ ಅಥವಾ ಸಹಜವೇ? ಕೆಲವೊಮ್ಮೆ ಕಠಿಣ. ಕೆಲವೊಮ್ಮೆ ಸಹಜವೆನಿಸುತ್ತದೆಯೇ? ಸಂಪೂರ್ಣರಾಗಲೇಬೇಕು – ಇದೇ ಲಕ್ಷ್ಯವಿದೆಯಲ್ಲವೇ, ಲಕ್ಷ್ಯವಂತೂ ಶ್ರೇಷ್ಠವಾಗಿದೆಯಲ್ಲವೇ! - ಪರವಾಗಿಲ್ಲ ಎಲ್ಲಾ ನಡೆಯುತ್ತದೆ ಎಂದು ಲಕ್ಷ್ಯವೂ ಸಡಿಲವಾಗಿದೆಯೇ? ಈ ರೀತಿ ಇರಬಾರದು. ಸ್ವಲ್ಪ ಯಾವುದಾದರೊಂದು ವಿಷಯ ನಡೆಯುತ್ತಲೇ ಇರುತ್ತದೆ ಎಂದು ಯೋಚಿಸುತ್ತಿಲ್ಲ ತಾನೇ? ಸ್ವಲ್ಪ ಹಾಗೆಯೇ ನಡೆಯುತ್ತಿರುತ್ತವೆ, ಪರವಾಗಿಲ್ಲ, ಯಾರಿಗೆ ತಿಳಿಯುತ್ತದೆ, ಯಾರು ಮನಸ್ಸನ್ನಂತು ನೋಡಲಾಗುವುದಿಲ್ಲ, ಕರ್ಮದಲ್ಲಂತೂ ಬರುತ್ತಿಲ್ಲ ಹೀಗೆ ಯೋಚಿಸುತ್ತಿಲ್ಲ ತಾನೇ? ಆದರೆ ನಿಮ್ಮ ಮನಸ್ಸಿನ ತರಂಗಗಳನ್ನು ಕೂಡ ನೀವು ಬಚ್ಚಿಡಲು ಸಾಧ್ಯವಿಲ್ಲ. ನಡೆಸುವವರನ್ನು ಬಾಪ್‌ದಾದಾರವರು ಚೆನ್ನಾಗಿ ತಿಳಿದಿದ್ದಾರೆ. ಈ ರೀತಿ ಬಹಿರಂಗವಾಗಿ ಹೇಳುವುದಿಲ್ಲ. ಇಲ್ಲವಾದರೆ ಹೆಸರೂ ಕೂಡ ಔಟ್ ಮಾಡಬಹುದು. ಆದರೆ ಈಗ ಮಾಡುವುದಿಲ್ಲ. ನಡೆಸುವವರು ಸ್ವಯಂ ನಡೆಯುತ್ತಾ ನಡೆಯುತ್ತಾ, ನಡೆಸುತ್ತಾ ನಡೆಸುತ್ತಾ ಶ್ರೀಮತದವರೆಗೂ ತಲುಪಿ ಬಿಡುವರು. ಆದರೆ ಲಕ್ಷ್ಯ ಎಲ್ಲರದ್ದು ಸಂಪೂರ್ಣ ಪವಿತ್ರತೆಯೇ ಆಗಿದೆ.

ಇಡೀ ಚಕ್ರದಲ್ಲಿ ನೋಡಿ – ಕೇವಲ ದೈವೀ ಆತ್ಮರದೇ ಶರೀರವೂ ಸಹ ಪವಿತ್ರವಾಗಿದೆ ಮತ್ತು ಆತ್ಮವು ಪವಿತ್ರವಾಗಿದೆ. ಬೇರೆ ಯಾರೆಲ್ಲಾ ಬಂದರೂ- ಆತ್ಮ ಪವಿತ್ರವಾಗಿ ಬಿಟ್ಟರೂ ಸಹ ಶರೀರ ಪವಿತ್ರವಿಲ್ಲ. ನೀವು ಅತ್ಮರು ಬ್ರಾಹ್ಮಣ ಜೀವನದಲ್ಲಿ ಈ ರೀತಿ ಪವಿತ್ರರಾಗುವಿರಿ ಅದರಿಂದಲೇ ಶರೀರವನ್ನು ಮತ್ತು ಪ್ರಕೃತಿಯನ್ನೂ ಸಹ ಪವಿತ್ರ ಮಾಡಿ ಬಿಡುವಿರಿ. ಆದ್ದರಿಂದಲೇ ಶರೀರವು ಪವಿತ್ರವಾಗಿದೆ ಮತ್ತು ಆತ್ಮವು ಪವಿತ್ರವಾಗಿದೆ ಆದರೆ ಶರೀರ ಹಾಗೂ ಅತ್ಮ ಎರಡೂ ಪವಿತ್ರವಾಗಿರುವ ಆತ್ಮರನ್ನು ನೋಡಿದ್ದೀರಾ? ಆ ಆತ್ಮರು ಎಲ್ಲಿದ್ದಾರೆ? ಆ ಆತ್ಮರು ನೀವೇ ಆಗಿದ್ದೀರಿ! ನೀವೆಲ್ಲರು ಆಗಿದ್ದೀರಾ ಅಥವಾ ಕೆಲವರೇ ಆಗಿದ್ದೀರಾ? ಪಕ್ಕಾ ಇದೆಯಲ್ಲವೇ ನಾವೆ ಆಗಿದ್ದೆವು. ನಾವೇ ಆಗುತ್ತಿದ್ದೇವೆ. ಹೈಯೆಸ್ಟ್ ಸಹ ಹಾಗೂ ಹೋಲಿಯೆಸ್ಟ್ ಸಹ ನೀವೇ ಆಗಿದ್ದೀರಿ. ಎರಡೂ ಆಗಿದ್ದೀರಲ್ಲವೇ! ಹೇಗೆ ಆದಿರಿ? ಬಹಳ ಅಲೌಕಿಕ ಆತ್ಮಿಕ ಹೋಲಿ ಆಚರಿಸುವುದರಿಂದ ಹೋಲಿ ಆಗಿ ಬಿಟ್ಟಿರಿ. ಹೋಲಿ ಆಡಿದಿರಿ ಅದರಿಂದ ಹೋಲಿಯೆಸ್ಟ್ ಸಹ ಆದಿರಿ ಹಾಗೂ ಹೈಯೆಸ್ಟ್ ಸಹ ಆಗಿದ್ದೀರಿ.

ಎಲ್ಲದಕ್ಕಿಂತ ಒಳ್ಳೆಯ ಶೃಂಗಾರ ಯಾವುದಾಗಿದೆ? ಎಲ್ಲದಕ್ಕಿಂತ ಅವಿನಾಶಿ ಬಣ್ಣವಾಗಿದೆ ತಂದೆಯ ಸಂಗದ ಬಣ್ಣ. ಯಾವ ರೀತಿಯ ಸಂಗವಿರುತ್ತದೆಯೋ ಆದೇ ರೀತಿಯ ಬಣ್ಣ ಏರುತ್ತದೆ. ನಿಮಗೆ ಯಾರ ರಂಗು ಏರಿದೆ? ತಂದೆಯ ಬಣ್ಣವಲ್ಲವೇ? ಎಂದ ಮೇಲೆ ತಂದೆಯ ಸಂಗದ ರಂಗು ಎಷ್ಟು ಪಕ್ಕಾ ಏರಿರುತ್ತದೆಯೋ ಅಷ್ಟೇ ಹೋಲಿ ಆಗಿಬಿಡುವಿರಿ. ಸಂಪೂರ್ಣ ಪವಿತ್ರರಾಗಿ ಬಿಡುವಿರಿ. ಸಂಗದ ರಂಗಂತೂ ಸಹಜವಾಗಿದೆಯಲ್ಲವೇ! ಸಂಗದಲ್ಲಿರಿ. ರಂಗು ಸ್ವತಃವಾಗಿ ಏರಿ ಬಿಡುವುದು. ಪರಿಶ್ರಮ ಪಡುವ ಅವಶ್ಯಕತೆಯೂ ಇಲ್ಲ. ಸಂಗದಲ್ಲಿ ಇರುವುದು ಬರುತ್ತದೆಯಲ್ಲವೇ? ಅಥವಾ ಡಬಲ್

ವಿದೇಶಿಯರಿಗೆ ಒಬ್ಬಂಟಿಯಾಗಿರುವುದು, ಒಂಟಿತನದ ಅನುಭವ ಮಾಡುವುದು ಬೇಗ ಬರುತ್ತದೆಯೋ? ಆಗಾಗ ಕಂಪ್ಲೇಂಟ್ ಬರುತ್ತಿರುತ್ತದೆಯಲ್ಲವೇ - ನಾನು ನನ್ನನ್ನು ಅಲೋನ್ (ಒಂಟಿ)ಯಾಗಿ ಅನುಭವ ಮಾಡುತ್ತೇನೆ. ಏಕೆ ಒಂಟಿಯಾಗಿರುತ್ತೀರಿ? ಏಕೆ ಒಂಟಿತನವೆನಿಸುತ್ತದೆ? ಅಭ್ಯಾಸವಾಗಿದೆ ಆದ್ದರಿಂದಲೇ? ಬ್ರಾಹ್ಮಣ ಆತ್ಮರು ಒಂದು ಸೆಕೆಂಡ್ ಸಹ ಒಂಟಿಯಾಗಿರಲು ಸಾಧ್ಯವಿಲ್ಲ. ಸಾಧ್ಯವೇ? (ಇಲ್ಲ) ಇರಬಾರದು ಆದರೆ ಇದ್ದು ಬಿಡುತ್ತೇವೆ! ಬಾಪ್‌ದಾದಾರವರು ಸ್ವಯಂ ತನ್ನ ಜೊತೆಗಾರರನ್ನಾಗಿ ಮಾಡಿ ಕೊಂಡಿದ್ದಾರೆ. ಮತ್ತೆ ಒಂಟಿ ಆಗಲು ಹೇಗೆ ಸಾಧ್ಯ! ಕೆಲವು ಮಕ್ಕಳು ಹೇಳುತ್ತಾರೆ- ತಂದೆಯನ್ನು 'ಕಂಪ್ಯಾನಿಯನ್' (ಜೊತೆಗಾರ) ಅಂತೂ ಮಾಡಿಕೊಂಡಿದ್ದೇವೆ. ಆದರೆ ಸದಾ ಕಂಪನಿ(ಜೊತೆ) ಇರುವುದಿಲ್ಲ. ಯಾಕೆ? ಕಂಪ್ಯಾನಿಯನ್ ಮಾಡಿಕೊಂಡಿದ್ದೀರಿ. ಇದಂತೂ ಸರಿಯಾಗಿದೆ. ಎಲ್ಲರಿಗೂ ಕೇಳುತ್ತೇವೆ - ನಿಮ್ಮ ಕಂಪಾನಿಯನ್ ಯಾರಾಗಿದ್ದಾರೆ? ಎಂದು. 'ಬಾಬಾ ಎಂದೇ ಹೇಳುತ್ತಾರೆ'.

ಬಾಬಾರವರು ನೋಡಿದರು - ಕೇವಲ ಕಂಪ್ಯಾನಿಯನ್ ಮಾಡಿಕೊಳ್ಳುವುದರಿಂದ ಕೆಲಸ ನಡೆಯುವುದಿಲ್ಲ. ಕೆಲವೊಮ್ಮೆ ಒಂಟಿಯಾಗಿ ಬಿಡುವಿರಿ, ಈಗ ಮತ್ತೆ ಯಾವ ಯುಕ್ತಿಯನ್ನು ತಮ್ಮದಾಗಿಸಿಕೊಳ್ಳಬೇಕು? ಕಂಪ್ಯಾನಿಯನ್ ಮಾಡಿಕೊಂಡಿದ್ದೀರಿ ಆದರೆ ಕಂಬೈಂಡ್ ಆಗಿಲ್ಲ. ಕಂಬೈಂಡ್ ಸ್ವರೂಪ ಎಂದಿಗೂ ಬೇರೆಯಾಗುವುದಿಲ್ಲ. ಕಂಪ್ಯಾನಿಯನ್ನಿಂದ ಕೆಲವೊಮ್ಮೆ ಫ್ರೆಂಡ್‌ಲೀಃ ಜಗಳವೂ ಸಹ ಆಗಿ ಹೋಗುತ್ತದೆ ಎಂದಾಗ ಬೇರೆಯಾಗಿಹೋಗುತ್ತೀರಿ. ಕೆಲವೊಮ್ಮೆ ಎಂತಹ ಮಾತು ಆಗಿ ಹೋಗುತ್ತದೆ ಎಂದರೆ ತಂದೆಯಿಂದ ಬೇರೆಯಾಗಿ ಒಂಟಿಯಾಗಿ ಬಿಡುವಿರಿ. ಕಂಪ್ಯಾನಿಯನ್ನಂತೂ ಮಾಡಿಕೊಂಡಿದ್ದೀರಿ ಆದರೆ ಕಂಪ್ಯಾನಿಯನ್ ಅನ್ನು ಕಂಬೈನ್ಡ್ ರೂಪದಲ್ಲಿ ಅನುಭವ ಮಾಡಿ. ಆಗ ಬೇರೆ ಆಗಲು ಸಾಧ್ಯವಿಲ್ಲ. ನಮ್ಮ ಕಂಬೈಂಡ್ ರೂಪವನ್ನು ಬೇರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ ಇಂತಹ ಅನುಭವವನ್ನು ಮತ್ತೆ ಮತ್ತೆ ಸ್ಮೃತಿಯಲ್ಲಿ ತಂದು ಸ್ಮೃತಿ - ಸ್ವರೂಪರಾಗಿ ಬಿಡಿ. ಮತ್ತೆ ಮತ್ತೆ ಚೆಕ್ ಮಾಡಿಕೊಳ್ಳಿ ಕಂಬೈನ್ಡ್ ಆಗಿದ್ದೇನೆಯೇ ಬದಿಗೆ ಸರಿಸಿಲ್ಲವೇ? ಎಷ್ಟು ಕಂಬೈನ್ಡ್ ರೂಪದ ಅನುಭವವನ್ನು ಹೆಚ್ಚಿಸುತ್ತಾ ಹೋಗುತ್ತೀರೋ ಅಷ್ಟು ಬ್ರಾಹ್ಮಣ ಜೀವನ ಬಹಳ ಪ್ರಿಯವಾಗಿ, ಮನೋರಂಜಕವಾಗಿ ಅನುಭವವಾಗುವುದು. ಎಂದ ಮೇಲೆ ಇಂತಹ ಹೋಲಿಯನ್ನಾಚರಿಸಲು ಬಂದಿದ್ದೀರಿ ಅಲ್ಲವೇ ಅಥವಾ ಕೇವಲ ರಂಗಿನ ಹೋಲಿ ಆಚರಿಸಿ ಹೋಲಿ ಆಗಿ ಹೋಯಿತು ಎಂದು ಹೇಳುತ್ತೀರಾ, ಸದೈವ ನೆನಪಿಟ್ಟುಕೊಳ್ಳಿ ಸಂಗದ ರಂಗಿನ ಹೋಲಿಯಿಂದ ಸಹಜವಾಗಿ ಹೋಲಿಯೆಸ್ಟ್ ಹಾಗು ಹೈಯೆಸ್ಟ್ ಆಗಿಬಿಡುವಿರಿ, ಕಷ್ಟವಿಲ್ಲ ಸಹಜವಾಗಿರುವುದು. ಪರಮಾತ್ಮನ ಸಂಗ ಎಂದಿಗೂ ಕಷ್ಟದ ಅನುಭವ ಮಾಡಿಸುವುದಿಲ್ಲ. ಬಾಪ್‌ದಾದಾರವರಿಗೂ ಮಕ್ಕಳ ಪರಿಶ್ರಮ ಅಥವಾ ಕಷ್ಟ ಅನುಭವ ಮಾಡಿಸುವುದು ಚೆನ್ನಾಗಿ ಅನಿಸುವುದಿಲ್ಲ. ಮಾಸ್ಟರ್ ಸರ್ವಶಕ್ತಿವಂತ ಹಾಗೂ ಸರ್ವಶಕ್ತಿವಂತನ ಕಂಬೈಡ್ ರೂಪ ಮತ್ತು ಕಷ್ಟ ಎಂದು ಹೇಳಲು ಹೇಗೆ ಸಾಧ್ಯ. ಅವಶ್ಯವಾಗಿ ಯಾವುದೋ ನಿರ್ಲಕ್ಷ್ಯ ಅಥವಾ ಅಲಸ್ಯ ಅಥವಾ ಹಳೆಯ ಪಾಸ್ಟ್ ಜೀವನದ ಸಂಸ್ಕಾರ ಇಮರ್ಜ್ ಆಗುತ್ತದೆ ಹಾಗಾಗಿ ಕಷ್ಟ ಎನಿಸುತ್ತದೆ. ಮರುಜೀವ ಆಗಿಬಿಟ್ಟಿದ್ದೀರಿ ಅಂದಾಗ ಹಳೆಯ ಸಂಸ್ಕಾರದ ಮೃತ್ಯುವು ಆಗಿ ಹೋಯಿತು. ಹಳೆಯ ಸಂಸ್ಕಾರ ಇಮರ್ಜ್ ಆಗಲು ಸಾಧ್ಯವಿಲ್ಲ. ಸಂಪೂರ್ಣವಾಗಿ ಮರೆತುಬಿಡಿ. ಇವೆಲ್ಲಾ ಹಳೆಯ ಜನ್ಮದ್ದಾಗಿದೆ. ಬ್ರಾಹ್ಮಣ ಜನ್ಮದ್ದಲ್ಲ. ಹಳೆಯ ಜನ್ಮ ಸಮಾಪ್ತಿಯಾಗಿ ಹೊಸ ಜನ್ಮ ಧಾರಣೆ ಮಾಡಿದಿರಿ ಅರ್ಥಾತ್ ಹೊಸ ಜನ್ಮ ಹೊಸ ಸಂಸ್ಕಾರವಿರಬೇಕು.

ಒಂದು ವೇಳೆ ಮಾಯೆ ಹಳೆಯ ಸಂಸ್ಕಾರವನ್ನು ಇಮರ್ಜ್ ಮಾಡಿಸಿದರೆ ಯೋಚಿಸಿ ಒಂದು ವೇಳೆ ಬೇರೆಯವರ ವಸ್ತುವನ್ನು ಯಾರಾದರೂ ತೆಗೆದುಕೊಂಡು ಬಂದು ಕೊಟ್ಟರೆ ನೀವು ಏನು ಮಾಡುವಿರಿ? ಇಟ್ಟುಕೊಳ್ಳುತ್ತೀರಾ? ಸ್ವೀಕಾರ ಮಾಡುವಿರಾ? ಯೋಚಿಸುತ್ತೀರಲ್ಲವೇ - ಇದು ನಮ್ಮ ವಸ್ತು ಅಲ್ಲ. ಇದು ಬೇರೆಯವರ ವಸ್ತು ನಾನು ಹೇಗೆ ತೆಗೆದುಕೊಳ್ಳಲಿ. ಒಂದು ವೇಳೆ ಮಾಯೆ ಹಳೆಯ ಜನ್ಮದ ಸಂಸ್ಕಾರ ಇಮರ್ಜ್ ಮಾಡುವ ರೂಪದಲ್ಲಿ ಬರುತ್ತದೆ ಎಂದರೆ ನಿಮ್ಮ ವಸ್ತುವಂತೂ ಬಂದಿಲ್ಲವಲ್ಲ. ಯೋಚಿಸಿ - ಇದು ನನ್ನ ವಸ್ತುವಲ್ಲ. ಇದು ಪರರ ವಸ್ತುವಾಗಿದೆ ಪರರ ವಸ್ತುವನ್ನು ಸಂಕಲ್ಪದಲ್ಲಿಯೂ ತನ್ನದೆಂದು ಅಂದುಕೊಳ್ಳಬೇಡಿ. ಅಂದುಕೊಳ್ಳಲು ಸಾಧ್ಯವೇ? ಯೋಚಿಸಿ - ಬೇರೆಯವರ ವಸ್ತು ಅವಶ್ಯವಾಗಿ ಮೋಸ ಮಾಡುವುದು, ದುಃಖ ಕೊಡುವುದು. ಯೋಚಿಸಿ ಅದೇ ಸೆಕೆಂಡ್ ಬೇರೆಯವರ ವಸ್ತುವನ್ನು ಬಿಟ್ಟುಬಿಡಿ. ಎಸೆದುಬಿಡಿ ಅರ್ಥಾತ್ ಬುದ್ಧಿಯಿಂದ ತೆಗೆದು ಹಾಕಿ. ಬೇರೆಯವರ ವಸ್ತುವನ್ನು ತನ್ನ ಬುದ್ಧಿಯಲ್ಲಿ ಇಟ್ಟುಕೊಳ್ಳಬೇಡಿ. ಇಲ್ಲವಾದರೆ ಬೇಸರ ಪಡಿಸುತ್ತಿರುತ್ತದೆ. ಸದಾ ಈ ಯೋಚನೆ ಮಾಡಿ - "ಬ್ರಾಹ್ಮಣ ಜೀವನದಲ್ಲಿ ತಂದೆ ಏನೇನು ಕೊಟ್ಟರು! ಬ್ರಾಹ್ಮಣ ಜೀವನ ಅರ್ಥಾತ್ ನನ್ನ ನಿಜ ಸ್ವಭಾವ. ಸಂಸ್ಕಾರ, ವೃತ್ತಿ, ದೃಷ್ಟಿ, ಸ್ಮೃತಿ ಏನಾಗಿದೆ ?" ಇದು ನಿಜವಾಗಿದೆಯೇ ಅದು ಬೇರೆಯವರದ್ದಾಗಿದೆ. ಬೇರೆಯವರ ವಸ್ತು ಚೆನ್ನಾಗೆನಿಸುತ್ತದೆಯೋ ಅಥವಾ ತನ್ನ ವಸ್ತು ಚೆನ್ನಾಗೆನಿಸುತ್ತದೆಯೋ? ಅದು ರಾವಣನ ವಸ್ತುವಾಗಿದೆ ಹಾಗೂ ಇದು ತಂದೆಯ ವಸ್ತುವಾಗಿದೆ ಯಾವುದು ಚೆನ್ನಾಗೆನಿಸುತ್ತದೆ? ಕೆಲವೊಮ್ಮೆ ತಪ್ಪಾಗಿಯೂ ಸಂಸ್ಕಾರದಲ್ಲಿಯೂ ತರಬೇಡಿ - "ಏನು ಮಾಡುವುದು, ನನ್ನ ಸ್ವಭಾವವೇ ಹೀಗಿದೆ. ನನ್ನ ಸಂಸ್ಕಾರವೇ ಹೀಗಿದೆ? ಏನು ಮಾಡುವುದು. ಸಂಸ್ಕಾರವನ್ನು ಅಳಿಸುವುದು ಬಹಳ ಕಷ್ಟವಾಗಿದೆ" ನಿಮ್ಮದು ಅಲ್ಲವೇ ಅಲ್ಲ. ನನ್ನದು ಎಂದು ಏಕೆ ಹೇಳುವಿರಿ? ನನ್ನದು ಇಲ್ಲವೇ ಇಲ್ಲ. ರಾವಣನ ವಸ್ತುವನ್ನು ನನ್ನದು ಎನ್ನುತ್ತೀರಿ! ನನ್ನದನ್ನಾಗಿಸಿಕೊಳ್ಳುತ್ತೀರಲ್ಲವೇ ಆಗಲೇ ಆ ಸಂಸ್ಕಾರವು ಇವರು ತನ್ನವರನ್ನಾಗಿಸಿಕೊಂಡರು ಎಂದು ತಿಳಿಯುತ್ತದೆ, ಈಗ ಚೆನ್ನಾಗಿ ಇವರ ಖಾತಿರಿ ಮಾಡುವೆ. ನಿಜ ಸಂಸ್ಕಾರ, ನಿಜ ಸ್ವಭಾವವನ್ನು ಇಮರ್ಜ್ ಮಾಡಿ ಆಗ ಅದು ಸ್ವತಃವಾಗಿಯೇ ಮರ್ಜ್ ಆಗಿ ಬಿಡುವುದು. ಏನು ಮಾಡಬೇಕು ಎಂದು ತಿಳಿಯಿತೇ?

ಎಂದ ಮೇಲೆ ಈ ರೀತಿ ಹೋಲಿಯನ್ನು ಆಚರಿಸಲು ಬಂದಿದ್ದೀರಿ ಅಲ್ಲವೇ. ಅವರು ಒಂದು ದಿನ ಹೇಳುತ್ತಾರೆ. ಹೋಲಿಯಾಗಿದೆ. ಎರಡನೆಯ ದಿನ ಹೇಳುವರು ಹೋಲಿ ಆಗಿ ಹೋಯಿತು. ಹಾಗೂ ನೀವು ಏನು ಹೇಳುವಿರಿ? ನೀವು ಹೇಳುವಿರಿ ನಾವು ಸದಾ ಸಂಗದ ರಂಗಿನಲ್ಲಿ ಹೋಲಿಯನ್ನು ಆಚರಿಸುತ್ತಾ ಇದ್ದೇವೆ. ಹಾಗೂ ಹೋಲಿ ಆಗಿ ಹೋಗಿದ್ದೇವೆ. ಹೋಲಿಯನ್ನು ಆಚರಿಸುತ್ತಾ ಆಚರಿಸುತ್ತಾ ಹೋಲಿ ಆಗಿ ಬಿಟ್ಟೆವು. ಹೋಲಿಯನ್ನು ಆಚರಿಸಿ ಬಿಟ್ಟಿದ್ದೀರಾ ಅಥವಾ ಹೋಲಿಯನ್ನು ಆಚರಿಸಬೇಕೆ? ಯಾವಾಗಿನಿಂದ ಬ್ರಾಹ್ಮಣರಾದಿರೋ ಆಗಿನಿಂದ ಹೋಲಿಯನ್ನು ಆಚರಿಸುತ್ತಿದ್ದೀರೇ? ಏಕೆಂದರೆ ಸಂಗಮಯುಗದ ಸಮಯವೇ ಸದಾ ಉತ್ಸಾಹದ ಸಮಯವಾಗಿದೆ. ಪ್ರಪಂಚದವರು ಎಕ್ಸ್ ಟ್ರಾ ಖರ್ಚನ್ನು ಮಾಡಿ ಮೋಜನ್ನು ಮಾಡುವರು. ಆದರೆ ನೀವು ಸದಾ ಪ್ರತೀ ಸೆಕೆಂಡು ಮೊಜನ್ನು ಆಚರಿಸುವವರಾಗಿದ್ದೀರಿ. ಪ್ರತೀ ಸೆಕೆಂಡ್ ಹಾಡುತ್ತಾ ಕುಣಿಯುತ್ತಾ ಇರುತ್ತೀರಿ. ಸದಾ ಖುಷಿಯಲ್ಲಿ ಕುಣಿಯುತ್ತೀರೋ ಅಥವಾ ಸಾಂಸ್ಕೃತಿಕ ಪ್ರೋಗ್ರಾಂ ಆಗುತ್ತದೆ ಎಂದರೆ ಆಗ ಮಾತ್ರ ಕುಣಿಯುತ್ತೀರೋ. ಸದಾ ಕುಣಿಯುತ್ತೀರಲ್ಲವೇ? ಸದಾ ತಂದೆಯ ಮಹಿಮೆ ಹಾಗೂ ತನ್ನ ಪ್ರಾಪ್ತಿಗಳ

ಗೀತೆಯನ್ನು ಹಾಡುತ್ತೀರಿ. ಎಲ್ಲರಿಗೂ ಹಾಡಲು ಬರುತ್ತದೆಯಲ್ಲವೇ. ಎಲ್ಲರೂ ಹಾಡಬಲ್ಲಿರಿ. ಎಲ್ಲರೂ ಕುಣಿಯಬಲ್ಲಿರಿ. ಸದಾ ಕುಣಿಯುವುದು ಹಾಡುವುದು ಕಷ್ಟವೇನು! ಸಹಜವಾಗಿದೆ ಹಾಗೂ ಅನುಭವ ಮಾಡುತ್ತಾ ಸಂಪನ್ನರಾಗಲೇಬೇಕಾಗಿದೆ. ಎಂದಿಗೂ ಈ ರೀತಿ ಯೋಚಿಸಬೇಡಿ - ಗೊತ್ತಿಲ್ಲ. ನಾವು, ಸಂಪನ್ನರಾಗುತ್ತೇವೋ ಇಲ್ಲವೋ. ಈ ಬಲಹೀನ ಸಂಕಲ್ಪ ಎಂದಿಗೂ ಬರಲು ಬಿಡಬೇಡಿ. ಸದಾ ಇದನ್ನೇ ಯೋಚಿಸಿ - ಅನೇಕ ಬಾರಿ ನಾನೆ ಆಗಿದ್ದೇನೆ ಹಾಗೂ ನಾನೇ ಆಗಬೇಕಾಗಿದೆ. ಒಳ್ಳೆಯದು.

**ನಾಲ್ಕಾರು ಕಡೆಯ ಸದಾ ಪರಮಾತ್ಮನ ಸಂಗದ ರಂಗಿನಲ್ಲಿ ಹೋಲಿ ಆಚರಣೆ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಸೃಷ್ಟಿ ಚಕ್ರದಲ್ಲಿ ಸದಾ ಹೈಯೆಸ್ಟ್ ಪಾತ್ರವನ್ನು ಅಭಿನಯಿಸುವಂತಹ ಶ್ರೇಷ್ಠ ಅತ್ಮರಿಗೆ, ಸರ್ವ ಆತ್ಮರಿಗಿಂತ ಶ್ರೇಷ್ಠ ಹೋಲಿಯೆಸ್ಟ್ ಅತ್ಮರಿಗೆ, ಸದಾ ಕಂಬೈಂಡ್ ಇರುವಂತಹ ಪದಮಾಪದಮ್ ಭಾಗ್ಯವಂತ ಆತ್ಮರಿಗೆ, ಸದಾ ಸರ್ವರ ಕಷ್ಟವನ್ನೂ ಸಹ ಸಹಜ ಮಾಡುವಂತಹ ಬ್ರಾಹ್ಮಣ ಆತ್ಮರಿಗೆ, ಸದಾ ಹೊಸ ಜನ್ಮದ ಹೊಸ ಸ್ವಭಾವ - ಸಂಸ್ಕಾರ, ಹೊಸ ಉಲ್ಲಾಸ ಹಾಗೂ ಉತ್ಸಾಹದಲ್ಲಿರುವಂತಹ ಹಾರುವ ಕಲೆಯ ಅನುಭವೀ ಆತ್ಮರಿಗೆ ಬಾಪ್ ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದಾದಿ ಜಾನಕೀಜಿಯವರೊಂದಿಗೆ ಭೇಟಿ.**

ಚೆನ್ನಾಗಿ ನಡೆಯುತ್ತಿದೆಯಲ್ಲವೇ ರಥವನ್ನು ನಡೆಸುವ ವಿಧಿ ಬಂದಿತು. ದಾದಿಯವರನ್ನು ಚೆನ್ನಾಗಿ ಇರುವುದನ್ನು ನೋಡಿ ಖುಷಿಯಾಗಿ ಆಡುತ್ತಾರೆ. ಶರೀರದ ನಾಲೆಜ್ ಫುಲ್, ಆತ್ಮದ ನಾಲೆಜ್ ಫುಲ್ ಸಹ ಆಗಿಬಿಟ್ಟದ್ದೀರಿ. ಹಿಂದಿನ ಲೆಕ್ಕಾಚಾರಗಳನ್ನು ಚುಕ್ತ ಮಾಡಲೇಬೇಕಾಗುತ್ತದೆ. ಆದರೆ ನಾಲೆಜ್ ಫುಲ್ ಆಗಿರುವುದರಿಂದ ಸಹಜವಾಗಿ ಚುಕ್ತವಾಗುತ್ತದೆ. ವಿಧಿ ಬಂದುಬಿಟ್ಟಿತಲ್ಲ. ನಡೆಯುವುದು ಹಾಗೂ ನಡೆಸುವುದು - ಎರಡರ ವಿಧಿಯು ಬಂದು ಬಿಟ್ಟಿತು. ಆದರೂ ಸಹ ಸೇವೆಯ ಬಲ ಆಶೀರ್ವಾದಗಳ ಕೆಲಸ ಮಾಡುತ್ತಿದೆ. ಈ ಆಶೀರ್ವಾದವೇ ಔಷಧಿಯ ಕೆಲಸ ಮಾಡುತ್ತಿದೆ. ಸೇವೆಯ ಉಮಂಗ ಬರುತ್ತದೆಯಲ್ಲವೇ - ಬೇಗ ಬೇಗ ತಯಾರಾಗಿ ಬಿಡಬೇಕು ಎಂದ ಮೇಲೆ ಸೇವೆ ಮಾಡಿ. ಯಾವ ಉತ್ಸಾಹ ಬರುತ್ತದೆಯೋ ಆ ಉತ್ಸಾಹ ತ್ರಿಶೂಲದಿಂದ ಮುಳ್ಳನ್ನಾಗಿಸಿ ಬಿಡುವುದು. ಒಳ್ಳೆಯದು. ಆದರೂ ಸಾಹಸ ಚೆನ್ನಾಗಿ ಇಟ್ಟುಕೊಂಡಿದ್ದೀರಿ.

(ಎಲ್ಲರೊಂದಿಗೆ) ನಿಮಿತ್ತ ಆತ್ಮರನ್ನು ನೋಡಿ ಖುಷಿ ಪಡುತ್ತೀರಲ್ಲವೇ. ಈಗ ಅವ್ಯಕ್ತ ವರ್ಷದಲ್ಲಿ ಪ್ರತಿಯೊಬ್ಬರು ಯಾವುದಾದರೂ ಕಮಾಲ್ ಮಾಡಿ ತೋರಿಸಿ. ಸೇವೆಯಲ್ಲಿ ಕಮಾಲ್ ಆಗುತ್ತಿದೆ, ಅದಂತೂ ಆಗಲೇ ಬೇಕು. ಆದರೆ ಪರ್ಸನಲ್ ಪುರುಷಾರ್ಥದಲ್ಲಿ ಇಂತಹ ತಮಾಲ್ ತೋರಿಸಿ, ನೋಡುವವರು ಹೇಳಲಿ - ಹಾ ಕಮಾಲ್ ಆಗಿದೆ! ಬೇರೆಯವರ ಮುಖದಿಂದ ಬರಲಿ - ಕಮಾಲ್ ಆಗಿದೆ. ಕೇವಲ ಹೀಗಲ್ಲ - ನಡೆಯುತ್ತಿದ್ದೇವೆ. ಸಾಗುತ್ತಿದ್ದೇವೆ. ಆದರೆ ಅದ್ಭುತ ಏನನ್ನು ಮಾಡಿದಿರಿ. ಅಸಂಭವವನ್ನು ಸಂಭವವನ್ನಾಗಿ ಮಾಡಿ ತೋರಿಸುವುದನ್ನೇ ಅದ್ಭುತ ಎಂದು ಹೇಳಲಾಗುತ್ತದೆ. ಪರಿಶ್ರಮವನ್ನು ಸಹಜ ಮಾಡಿ ತೋರಿಸಲಿ. ಯಾರ ಸ್ವಪ್ನದಲ್ಲಿಯೂ ಇರಲಿಲ್ಲ ಆ ಮಾತನ್ನು ಸಾಕಾರದಲ್ಲಿ ಮಾಡಿ ತೋರಿಸಿದರು - ಇದಕ್ಕೇ ಹೇಳಲಾಗುತ್ತದೆ ಅದ್ಭುತ. ಸಮಯ ಪ್ರಮಾಣ ಅದ್ಭುತಗಳು ಆಗಲೇಬೇಕು – ಅದು ಬೇರೆ ಮಾತಾಗಿದೆ. ಅದಂತೂ ಆಗಲೇಬೇಕು, ಆಗಿಯೇ ಬಿಟ್ಟಿವೆ. ಆದರೆ ಸ್ವಯಂನ ಅಟೆನ್ಶನ್‌ನಿಂದ ಇಂತಹ ಯಾವುದಾದರೂ

ಅದ್ಭುತವನ್ನು ಮಾಡಿ ತೋರಿಸಿ. ಬ್ರಹ್ಮಾತಂದೆಯ 25 ವರ್ಷಗಳು ಪೂರ್ತಿಯಾದವು. ಯಾವಾಗ ಯಾವುದಾದರೂ ಉತ್ಸವವನ್ನು ಆಚರಿಸುತ್ತೀರೆಂದರೆ ಯಾರ ಉತ್ಸವವನ್ನು ಆಚರಿಸುತ್ತೀರೋ ಅವರಿಗೆ ಹೃದಯ ಮೆಚ್ಚುವ ಬಹುಮಾನವನ್ನು ಕೊಡಲಾಗುತ್ತದೆ. ಬ್ರಹ್ಮಾತಂದೆಯ ಹೃದಯ ಮೆಚ್ಚುವ ಗಿಫ್ಟ್ ಏನಾಗಿದೆ? ಅದಂತೂ ತಿಳಿದುಕೊಂಡಿದ್ದೀರಲ್ಲವೇ. ಈ ವರ್ಷ ತಂದೆಗೆ ಏನು ಇಷ್ಟವಿದೆಯೋ ಆ ಮೆಚ್ಚುಗೆಯಾಗಿದ್ದನ್ನು ಕೊಡಬೇಕಾಗಿದೆ. ಎಲ್ಲರೂ ಈ ರೀತಿ ಮಾಡಿತೋರಿಸುತ್ತೀರಲ್ಲವೇ! ಅಥವಾ ಸ್ವಯಂಗೂ ಪರಿಶ್ರಮ ಅನುಭವ ಮಾಡುತ್ತೀರಾ, ಅವರಿಗೆ ಹೀಗೆ ಸಹಜವಾಗಿ ಬಿಡುವುದು ಯಾವುದು ಸ್ವಯಂ ಸಹ ಅನುಭವ ಮಾಡುವಿರಿ ಇದಂತೂ ಅದ್ಭುತವಾಯಿತು ಎಂದು. ಸರಿಯೇ, ಏನು ಮಾಡುವಿರಿ? ತಂದೆಯ ಹೃದಯ ಮೆಚ್ಚುವವರಾಗಿ ತೋರಿಸಿ. ಏನೇನು ಹೃದಯ ಮೆಚ್ಚುವುದಾಗಿದೆ - ಇದಂತೂ ತಿಳಿದುಕೊಂಡಿದ್ದೀರಿ. ತಂದೆಗೆ ಏನು ಪ್ರಿಯವಾಗಿದೆ. ಗೊತ್ತಿದೆಯಲ್ಲವೇ. ಒಳ್ಳೆಯದು! ನೋಡುತ್ತೇವೆ. ಯಾವ ಯಾವ ಗಿಫ್ಟ್ ಕೊಡುವಿರಿ. ಡಬಲ್ ವಿದೇಶಿ ತಮ್ಮ ಭಾಗ್ಯವನ್ನು ಚೆನ್ನಾಗಿ ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ. ವೃದ್ಧಿ ಮಾಡಿಕೊಳ್ಳುತ್ತಿದ್ದೀರಲ್ಲವೇ, ವೃದ್ಧಿ ಮಾಡುವವರಿಗೆ ಮೊದಲು ತಪಸ್ಸಿನ ಜೊತೆಗೆ ತ್ಯಾಗ ಮಾಡಲೇ ಬೇಕಾಗುತ್ತದೆ. ವೃದ್ಧಿ ಆಗುತ್ತದೆಯೆಂದರೆ ಖುಷಿಯಾಗುತ್ತದೆ ಅಥವಾ ಹೀಗೆ ತಿಳಿಯುತ್ತೀರಾ ನಮಗೆ ಕಡಿಮೆಯಾಗಿ ಬಿಡುವುದು? ಒಳ್ಳೆಯದು ವೃದ್ಧಿ ಚೆನ್ನಾಗಿ ಮಾಡುತ್ತಿದ್ದೀರಿ. ಈ ರೀತಿ ಯೋಚಿಸಬೇಡಿ ವೃದ್ಧಿಯಾಗುತ್ತಿದೆ. ಇಡೀ ಮಿಷನರಿ ಸೂಕ್ಷ್ಮ ವತನದಿಂದ ನಡೆಯುತ್ತಿದೆ. ನಮಗೆ ಕಡಿಮೆಯಾಗಿ ಬಿಡುತ್ತದೆ. ವೃದ್ಧಿಯಾಗುತ್ತದೆ. ಇಡೀ ಮಿಷನರಿ ಸೂಕ್ಷ್ಮವತನದಿಂದ ನಡೆಯುತ್ತದೆ.

ರಿವೈಸ್ ಕೋರ್ಸ್ 07-03-1993.

***ಹೋಲಿಯನ್ನು ಆಚರಿಸುವುದು ಅರ್ಥಾತ್ ಶ್ರೇಷ್ಠ ಮತ್ತು ಪವಿತ್ರರಾಗುವುದು***

ಎಲ್ಲದಕ್ಕಿಂತ ಅವಿನಾಶಿ ಬಣ್ಣವಾಗಿದೆ ತಂದೆಯ ಸಂಗದ ಬಣ್ಣ. ಅಂದಮೇಲೆ ತಂದೆಯ ಸಂಗದ ಹೋಲಿ ಎಷ್ಟು ಪಕ್ಕಾ ಏರುತ್ತದೆಯೋ ಅಷ್ಟು ಸಂಪೂರ್ಣ ಪವಿತ್ರರಾಗಿ ಬಿಡುವಿರಿ. ತಂದೆ ಮತ್ತು ನಾನು ಕಂಬೈನ್ಡ್ ರೂಪ, ಈ ರೂಪವನ್ನು ಯಾರೂ ಬೇರ್ಪಡಿಸಲು ಸಾಧ್ಯವಿಲ್ಲ ಇಂತಹ ಅನುಭವವನ್ನು ಮತ್ತೆ ಮತ್ತೆ ಸ್ಮೃತಿಯಲ್ಲಿ ತಂದು ಸ್ಮೃತಿ ಸ್ವರೂಪರಾಗಿಬಿಡಿ. ಎಷ್ಟು ಕಂಬೈನ್ಡ್ ರೂಪವನ್ನು ಹೆಚ್ಚಿಸುತ್ತಾ ಹೋಗುತ್ತೀರೋ ಅಷ್ಟು ಬ್ರಾಹ್ಮಣ ಜೀವನ ಬಹಳ ಪ್ರಿಯವಾಗಿ ಮನೋರಂಜಕವಾಗಿ ಅನುಭವವಾಗುವುದು. ಸದೈವ ನೆನಪಿಟ್ಟುಕೊಳ್ಳಿ ಸಂಗದ ರಂಗಿನ ಹೋಲಿಯಿಂದ ಸಹಜವಾಗಿ ಹೋಲಿಯೆಸ್ಟ್(ಪವಿತ್ರ) ಹಾಗೂ ಹೈಯೆಸ್ಟ್(ಶ್ರೇಷ್ಠ) ಆಗಿ ಬಿಡುವಿರಿ ಎಂದು ಹೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾವಾಕ್ಯಗಳಿಂದ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸೃಷ್ಟಿಚಕ್ರದಲ್ಲಿ ಎಲ್ಲರಿಗಿಂತಲೂ ಉನ್ನತ ಮತ್ತು ಪವಿತ್ರವಾಗಿದ್ದೇನೆ.

2. ನಾನು ಸ್ವಯಂ ಪರಮಾತ್ಮನ ಮೂಲಕ ಡೈರೆಕ್ಟ್ ಪಾಲನೆ, ವಿದ್ಯೆ, ಹಾಗೂ ಶ್ರೇಷ್ಠ ಜೀವನದ ಶ್ರೀಮತವನ್ನು ಪಡೆದುಕೊಂಡಿದ್ದೇನೆ.

3. ನಾನು ಅನಾದಿಯಲ್ಲಿ ಪರಂಧಾಮದಲ್ಲಿ ತಂದೆಯ ಸಮೀಪ ಮತ್ತು ಆದಿಕಾಲದಲ್ಲಿ ದೇವತಾ ಜೀವನದಲ್ಲಿ ತನು, ಮನ, ಧನ, ಜನ ನಾಲ್ಕು ಪ್ರಕಾರದ ಸರ್ವಪ್ರಾಪ್ತಿಗಳಿಂದ ಸಂಪನ್ನವಾಗಿ, ಮಧ್ಯಕಾಲದಲ್ಲಿ ಎಲ್ಲರಿಗಿಂತಲೂ ವಿಧಿಪೂರ್ವಕವಾದ ಪೂಜೆಯನ್ನು ಪಡೆಯುವ ಪೂಜ್ಯ ಸ್ವರೂಪವಾಗಿ, ಅಂತಿಮದಲ್ಲಿ ಶ್ರೇಷ್ಠಾತಿ ಶ್ರೇಷ್ಠ ಬ್ರಾಹ್ಮಣ, ಬ್ರಾಹ್ಮಣ ಸೋ ಡಬಲ್ ಲೈಟ್ ಫರಿಶ್ತಾ ಆಗಿದ್ದೇನೆ.

4. ನಾನು ವರ್ತಮಾನದಲ್ಲಿ ಮನಸ್ಸಿನಿಂದಲೂ ಕೂಡ ಯಾವುದೇ ವಿಕಾರವನ್ನು ಟಚ್ ಮಾಡದ ಸಂಪೂರ್ಣ ಪವಿತ್ರ ಸ್ವರೂಪ, ಸತ್ಯವಾದ ವೈಷ್ಣವ.

5. ನಾನು ಸ್ವಯಂ ಧೈರ್ಯದಿಂದ ತಂದೆಯ ಜೊತೆ ಇದ್ದು ಸಂಪೂರ್ಣ ಪವಿತ್ರತೆಯನ್ನು ಸಹಜವಾಗಿ ಧಾರಣೆ ಮಾಡಿದ್ದೇನೆ.

6. ನಾನು ಸಂಪನ್ನವಾಗಲೇಬೇಕು ಎಂಬ ಶ್ರೇಷ್ಠ ಲಕ್ಷ್ಯ ಧಾರಿ.

7. ನಾನು ಆತ್ಮ ಮತ್ತು ಶರೀರವನ್ನು ಪವಿತ್ರವಾಗಿಸಿಕೊಂಡು ಪ್ರಕೃತಿಯನ್ನು ಕೂಡ ಪವಿತ್ರವಾಗಿ ತಯಾರು ಮಾಡುವ ದೇವಾತ್ಮನು.

8. ನಾನು ತಂದೆಯ ಸಾಂಗತ್ಯವೆಂಬ ರಂಗಿನಿಂದ ಸಂಪೂರ್ಣವಾಗಿ ಮತ್ತು ಪವಿತ್ರವಾಗಿ ತಯಾರಾಗುವ ಭಾಗ್ಯಶಾಲಿಯಾಗಿದ್ದೇನೆ.

9. ನಾನು ಸರ್ವಶಕ್ತಿವಂತನೊಂದಿಗಿನ ಕಂಬೈನ್ಡ್ ಸ್ವೇರೂಪದಿಂದ ಈ ಬ್ರಾಹ್ಮಣ ಜೀವನವನ್ನು ಮನೋರಂಜಕವಾಗಿ ಅನುಭವ ಮಾಡಿಕೊಂಡು ಸಹಜವಾಗಿ ಉನ್ನತವಾಗಿ ಮತ್ತು ಪವಿತ್ರವಾಗಿ ತಯಾರರಾಗಿದ್ದೇನೆ.

10. ನಾನು ಆಲಸ್ಯ ಮತ್ತು ನಿರ್ಲಕ್ಷ್ಯ ಅಥವಾ ಯಾವುದೇ ಮಾಯೆಯ ಹಳೆಯ ಸ್ವಭಾವ ಸಂಸ್ಕಾರಗಳನ್ನು ಸಂಪೂರ್ಣವಾಗಿ ಮರೆತಿರುವ ಮರುಜೀವ ಜನ್ಮವನ್ನು ಅನುಭವ ಮಾಡುತ್ತಿದ್ದೇನೆ.

11. ನಾನು ರಾವಣನ (ಪರ)ವಸ್ತುವನ್ನು ನನ್ನದಾಗಿ ಭಾವಿಸುವುದನ್ನು ಸಮಾಪ್ತಿ ಮಾಡಿ, ಬ್ರಾಹ್ಮಣ ಜೀವನದ ನಿಜ ಸಂಸ್ಕಾರಗಳನ್ನು ನನ್ನದಾಗಿಸಿಕೊಂಡಿದ್ದೇನೆ.

12. ನಾನು ನಿಶ್ಚಯ ಬುದ್ಧಿಯಿಂದ ಸಂಪನ್ನವಾಗಿ ತಯಾರಾಗಿದ್ದೇನೆ.